ಪಿಡಬ್ಲೂ-1 ಓ.ಎಸ್.ನಂ.853/2008

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ.11.03.2025**

**ಪಾಟಿ ಸವಾಲುಃ 8 ನೇ ಪ್ರತಿವಾದಿ ಪರ ಶ್ರೀ.ಎನ್ ಜಿ ಎಮ್ ವಕೀಲರಿಂದಃ**

1. 1 ನೇ ವಾದಿ ತೋಟದ ಕೆಲಸ ಮಾಡುತ್ತಾರೆ. ಸದರಿಯವರನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದು ವಿಚಾರಣೆ ಮಾಡಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. 1 ನೇ ವಾದಿ ನನ್ನ ದೊಡ್ಡ ಮಾವ ಅಂದರೆ ನನ್ನ ತಾಯಿಯ ಅಣ್ಣ. ನನಗೆ ಈಗ 54 ವರ್ಷ ಇರುತ್ತದೆ. 1983 ನೇ ಸಾಲಿಗಿಂತ ಹಿಂದೆ ಆಗಿರುವ ಕುಟುಂಬದ ವ್ಯವಹಾರಗಳ ಬಗ್ಗೆ ನನಗಿಂತಲೂ 1 ನೇ ವಾದಿಗೆ ಚೆನ್ನಾಗಿ ಗೊತ್ತಿದ್ದೆ ಎಂದರೆ ಸರಿಯಲ್ಲ. 1 ನೇ ವಾದಿ ಮತ್ತು ನಾವು ಎಲ್ಲಿಯ ವರೆಗೆ ಒಟ್ಟು ಕುಟುಂಬದಲ್ಲಿ ವಾಸವಾಗಿದ್ದೆವು ಎಂದು ಹೇಳಲು ಆಗುವುದಿಲ್ಲ. ಯಾವ ವರ್ಷದಲ್ಲಿ ವಿಭಾಗ ಆಯಿತು ಎಂದು ನನಗೆ ಗೊತ್ತಿರುವುದಿಲ್ಲ. ಆ ರೀತಿ ಯಾರು ಯಾರಿಗೆ ಎಷ್ಟು ಭಾಗ ಹೋಗಿದೆ ಎಂದು ನನಗೆ ಗೊತ್ತಿರುತ್ತದೆ. ನನ್ನ ತಾಯಿ ಮತ್ತು 1 ನೇ ವಾದಿಗೆ ಎಷ್ಟು ಆಸ್ತಿಗಳು ಬಂದಿದೆ ಎಂದು ನನಗೆ ಗೊತ್ತಿರುವುದಿಲ್ಲ. 1 ನೇ ವಾದಿ ಚಿಕ್ಕಮುನಿಶಾಮಪ್ಪ ರವರ 3 ನೇ ಮಗ ಆಗಿದ್ದು, ಆತನೇ ನಮ್ಮ ಕುಟುಂಬದ ಎಲ್ಲಾ ವ್ಯವಹಾರಗಳು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಾತ ಚಿಕ್ಕಮುನಿಶಾಮಪ್ಪ ರವರು ತೀರಿಕೊಂಡ ನಂತರ ಬಾಯಿ ಮಾತಿನಂತೆ ಆಗಿದ್ದ ಭಾಗದಂತೆ ಅವರವರ ಭಾಗದ ವ್ಯವಹಾರವನ್ನು ಅವರವರೇ ನೋಡಿಕೊಳ್ಳುತ್ತಿದ್ದರು. ಆ ರೀತಿ 4 ನೇ ಪ್ರತಿವಾದಿಯ ಭಾಗಕ್ಕೆ ಬಂದಿದ್ದ ಆಸ್ತಿಯನ್ನು ಅವರೇ ಮಾರಾಟ ಮಾಡಿಕೊಂಡಿರುತ್ತಾರೆ.

2. 1 ನೇ ವಾದಿಗೆ ಓದಲು ಬರೆಯಲು ಬರುವುದಿಲ್ಲ. ಈ ದಾವೆಯನ್ನು ನಮ್ಮ ಭಾಗಕ್ಕೆ ನಾನೇ ಹಾಕಿಸಿರುತ್ತೇನೆ. ನನ್ನ ತಾತ ಚಿಕ್ಕಮುನಿಶಾಮಪ್ಪ 2006 ರಲ್ಲಿ ತೀರಿಕೊಂಡಿರುತ್ತಾರೆ. ನಾನು 8 ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ, ಆದರೆ ಇಂಗ್ಲೀಶ್ ಬರುವುದಿಲ್ಲ. ಸರ್ವೆ ನಂ.85/2 ರಲ್ಲಿ ಒಟ್ಟು ನಮ್ಮ ಕುಟುಂಬಕ್ಕೆ 18 ಗುಂಟೆ ಇತ್ತು. ಸದರಿ ಆಸ್ತಿ ನನ್ನ ತಾತನಿಗೆ ಅವರ ತಾತನಿಂದ ಬಂದಿರುತ್ತದೆ. ನನ್ನ ತಾತ ಕತೇರಿಕೊಂಡ ನಂತರ ಸರ್ವೆ ನಂ.85/2 ರಲ್ಲಿ 3 ಮತ್ತು 4 ನೇ ಪ್ರತಿವಾದಿಗಳು ಸ್ವಾದೀನ ಹೊಂದಿದ್ದರು. ಸದರಿಯವರು ಹಿಂದೆ ಆಗಿದ್ದ ಭಾಗದಂತೆ ಸ್ವಾದೀನ ಹೊಂದಿದ್ದರು ಎಂದರೆ ಸರಿಯಲ್ಲ. 1983 ರಲ್ಲಿ ವಿಭಾಗ ಆಗಿತ್ತು ಎಂದರೆ ಸರಿಯಲ್ಲ. ಸದರಿ ವಿಭಾಗದಂತೆ 4 ನೇ ಪ್ರತಿವಾದಿಗೆ ದಾವಾ-3 ಆಸ್ತಿಯಲ್ಲಿ 9 ಗುಂಟೆ ಆಸ್ತಿ ಬಂದಿತ್ತು ಎಂದರೆ ಸರಿಯಲ್ಲ. ನಿಪಿ-31 ರಂತೆ 4 ನೇ ಪ್ರತಿವಾದಿ 9 ಗುಂಟೆ ಆಸ್ತಿಯನ್ನು 8 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ಅವಾಗಲೇ ಮಾರಾಟ ಮಾಡಿದ್ದರು ಎಂದು ನುಡಿಯುತ್ತಾರೆ. ಆ ರೀತಿ ದಿಃ08.03.1983 ರಂತೆ ನಮ್ಮ ಕುಟುಂಬದಲ್ಲಿ ಆಗಿದ್ದ ವಿಭಾಗದಂತೆ ನಿಪಿ-31 ರಂತೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ.

3. 1983 ನೇ ಸಾಲಿನಲ್ಲಿ ನನ್ನ ವಯಸ್ಸು 10 ವರ್ಷ ಆಗಿತ್ತು ಎಂದರೆ ಸಾಕ್ಷಿ ಅದಕ್ಕಿಂತ ಜಾಸ್ತಿ ಆಗಿತ್ತು ಎಂದು ನುಡಿಯುತ್ತಾರೆ. 1983 ರಲ್ಲಿ ನಾನು ಚಿಕ್ಕ ಮಗು ಆಗಿದ್ದ ಕಾರಣ ನನಗೆ ಯಾವುದೇ ವ್ಯವಹಾರ

ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. 2 ನೇ ವಾದಿಯನ್ನು ಹೊಸಕೋಟೆ ತಾಲ್ಲೂಕು, ಕುಂಬಳಹಳ್ಳಿ ಗ್ರಾಮಕ್ಕೆ ಮದುವೆ ಮಾಡಿಕೊಟ್ಟಿದ್ದರು. ಮದುವೆ ಆದ ಸಂದರ್ಬದಿಂದಲೂ ನನ್ನ ತಾಯಿ ಕುಂಬಳಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿಗೆ ಯಾವ ವರ್ಷದಲ್ಲಿ ಮದುವೆಯಾಗಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ತಂದೆ ತಾಯಿ ಯಾವ ವರ್ಷದಲ್ಲಿ ಬೈಚಾಪುರಕ್ಕೆ ಬಂದರು ಎಂದು ನನಗೆ ಗೊತ್ತಿರುವುದಿಲ್ಲ. ಆ ರೀತಿ ನನ್ನ ತಾಯಿ ಬೈಚಾಪುರಕ್ಕೆ ಬಂದ ನಂತರ ನನ್ನ ತಾತನ ಮನೆಯಲ್ಲಿ ವಾಸವಾಗಿದ್ದರು. ತದ ನಂತರ ಯಾವ ವರ್ಷದಲ್ಲಿ ಶೀಟ್ ಮನೆ ರಿಪೇರಿ ಮಾಡಿಸಿಕೊಂಡೆವು ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಶೀಟ್ ಮನೆಯ ಖಾತೆಯನ್ನು ಈ ದಾವೆಯಲ್ಲಿ ಹಾಜರು ಪಡಿಸಿರುವುದಿಲ್ಲ ಮತ್ತು ಸದರಿ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ.

4. ನಿಪಿ-31 ರಂತೆ 8 ನೇ ಪ್ರತಿವಾದಿಯ ಹೆಸರಿಗೆ ಪಹಣಿ ಬರುತ್ತಿದೆ ಎಂದರೆ ಸರಿ. ಆ ರೀತಿ ಎಲ್ಲಾ ಕಂದಾಯ ದಾಖಲೆಗಳೂ 8 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 8 ನೇ ಪ್ರತಿವಾದಿಯು 9 ಗುಂಟೆ ಆಸ್ತಿಯಲ್ಲಿ ನೀಲಗಿರಿ ಮರಗಳನ್ನು ಹಾಕಿರುತ್ತಾರೆ. ಬೈಚಾಪುರ ಗ್ರಾಮದ ಸರ್ವೆ ನಂ.17 ಕ್ಕೆ ಸಂಬಂದಿಸಿದಂತೆ ನನ್ನ ತಾತ ಚಿಕ್ಕಮುನಿಯಪ್ಪ 1 ಎಕರೆ 15 ಗುಂಟೆ ಆಸ್ತಿಯನ್ನು ನನ್ನ ತಾಯಿ ಮತ್ತು ತಂದೆಯ ಹೆಸರಿಗೆ ಮರಣ ಶಾಸನ ಪತ್ರ ಬರೆದುಕೊಟ್ಟಿರುತ್ತಾರೆ. ಸದರಿ ಆಸ್ತಿ ನನ್ನ ತಾತನ ಸ್ವಯಾರ್ಜಿತ ಆಸ್ತಿ ಎಂದರೆ ಸರಿ. ಸದರಿ ಆಸ್ತಿಯು ನನ್ನ ತಾತನಿಗೆ ಉಳುವವನೆ ಭೂಮಿಯ ಒಡೆಯ ಎಂಬ ಯೋಜನೆಯ ಅಡಿಯಲ್ಲಿ ಬಂದಿರುತ್ತದೆ. ಸದರಿ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ.

**(ಈ ಹಂತದಲ್ಲಿ ಮುಂದುವರಿದ ವಾಟಿ ಸವಾಲಿಗೆ ಕಾಲವಕಾಶ ಕೋರಿದ್ದು, ನೀಡಲಾಯಿತು.)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ದೇವನಹಳ್ಳಿ.**